ಯುತ್ತಾರೆ, ಅಂದರೆ ಮಾಂಸಖಂಡಗಳ ಸಾಮರ್ಥ್ಯ. ಎರಡನೆಯದನ್ನು **ಬುದ್ಧಿಬಲ** ಎಂದು ಕರೆಯುತ್ತಾರೆ, ಎಂದರೆ ಬೌದ್ಧಿಕ ಸಾಮರ್ಥ್ಯ. ಮೂರನೆಯದೇ **ಆತ್ಮಬಲ** – ಆಧ್ಯಾತ್ಮಿಕ ಸಾಮರ್ಥ್ಯ. ಇವು ಮೂರರಲ್ಲಿ ಆಧ್ಯಾತ್ಮಿಕ ಬಲವೇ ಅತ್ಯಂತ ಶ್ರೇಷ್ಠವಾದ ಮತ್ತು ಸರ್ವವ್ಯಾಪಕವಾದ ಶಕ್ತಿ. ಆದ್ದರಿಂದ **ಬಾಹುಬಲ** ಮತ್ತು **ಬೌದ್ಧಿಕಬಲ**ಗಳ ಜೊತೆಜೊತೆಗೆ ಸ್ವಲ್ಪ **ಆತ್ಮಬಲ**ವನ್ನೂ ಬೆಳೆಸಿಕೊಳ್ಳಲು ಪ್ರಯತ್ನಿಸಿರಿ. ಸೃಜನಾತ್ಮಕ ಕಾರ್ಯಗಳಿಗೆ **ಬುದ್ಧಿಬಲ** ಬಹಳ ಉಪಯೋಗಕಾರಿ. ಆದರೆ ಅದರ ಹಿನ್ನೆಲೆಯಲ್ಲಿ **ಆತ್ಮಬಲ** ಇರುವುದು ಅವಶ್ಯ. **ಆತ್ಮಬಲ** ಇಲ್ಲದಿದ್ದರೆ, **ಬುದ್ಧಿಬಲ**ವು ಅಪಾಯಕಾರಿಯೂ ಹಾನಿಕಾರಕವೂ ಆಗಿ ಪರಿಣಮಿಸಬಹುದು. ಈಗಿನ ಕಾಲದಲ್ಲಿ ದರೋಡೆಕಾರರು ಕೂಡ ಒಳ್ಳೆಯ ಸುಶಿಕ್ಷಿತರೇ ಆಗಿರುತ್ತಾರೆ! ಜನರನ್ನು ದೋಚುವ ಎಲ್ಲ ವಿಧಾನಗಳೂ ಅವರಿಗೆ ಕರತಲಾಮಲಕವಾಗಿರುತ್ತವೆ!

ಈ ಸತ್ಯವನ್ನು ಪಾಶ್ಚಾತ್ಯ ಬುದ್ಧಿಜೀವಿಗಳೂ ಈಗ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಸ್ವತಃ ಅಜ್ಞೇಯವಾದಿಯಾದ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಬರ್ಟ್ರಾಂಡ್ ರಸೆಲ್ ಹೀಗೆ ಹೇಳುತ್ತಾನೆ *(Impact of Science on society, p. 110, Unwin Paperbacks, 1976 edition)*: "ಸಾಮಾನ್ಯವಾಗಿ ಹೇಳುವುದಾದರೆ, ನಾವು ಮಾನವ ಕುಶಲತೆ ಮತ್ತು ಮಾನವ ಮೂರ್ಖತನಗಳ ನಡುವಣ ಸ್ಪರ್ಧೆಯ ನಡುವೆ ಸಿಕ್ಕಿಹಾಕಿಕೊಂಡಿದ್ದೇವೆ. ಇಲ್ಲಿ ಮಾನವ ಕುಶಲತೆ ವಿಧಾನವಾದರೆ, ಮೂರ್ಖತನವು ಧ್ಯೇಯ ಅಥವಾ ಗುರಿಯಾಗಿಬಿಟ್ಟಿದೆ. ಆವಶ್ಯಕತೆಯಿರುವ ಕುಶಲತೆಯನ್ನು ಹೆಚ್ಚಿಸಿಕೊಂಡಾಗಲೆಲ್ಲ ಅದರ ಫಲವು (ಮಾನವನ ಮೂರ್ಖತನದ ಫಲವಾದ) ಕೆಡುಕೇ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಮಾನವ ಜನಾಂಗವು ಇದುವರೆಗೂ ತನ್ನ ಅಜ್ಞಾನ ಮತ್ತು ಅದಕ್ಷತೆಗಳ ಸಲುವಾಗಿಯೇ ಉಳಿದುಕೊಂಡು ಬಂದಿದೆ ಎಂದು ಕಾಣುತ್ತದೆ. ಅದಕ್ಕೆ ಜ್ಞಾನ ಮತ್ತು ದಕ್ಷತೆಯನ್ನು ನೀಡಿದರೂ, ಮೂರ್ಖತನವೂ ಸೇರಿಕೊಂಡರೆ, ಅದು ಅಸ್ತಿತ್ವದಲ್ಲಿ ಉಳಿಯುವ ಖಾತರಿಯೇನೂ ಇಲ್ಲ ಎಂದೇ ಅನಿಸುತ್ತದೆ. ಜ್ಞಾನವೆಂಬುದು ಶಕ್ತಿ, ನಿಜ. ಆದರೆ ಅದು ಕೆಡುಕಿನ ಅಧಿಕಾರದ (ಅದನ್ನು ಪಡೆಯುವ ಮತ್ತು ಉಳಿಸಿಕೊಳ್ಳುವ) ಶಕ್ತಿಯಾಗಿಯೂ ಪರಿಣಮಿಸಬಲ್ಲುದಷ್ಟೆ. ಇದರಿಂದ ನಮಗೆ ತಿಳಿದು ಬರುವುದು ಇಷ್ಟು : ಮನುಷ್ಯರಿಗೆ ಜ್ಞಾನದೊಡನೆ (knowledge) ಅರಿವು (wisdom) ಕೂಡ ಹೆಚ್ಚಾಗದಿದ್ದರೆ, ಬರಿಯ ಜ್ಞಾನದ ಹೆಚ್ಚಳವು ದುಃಖವನ್ನೂ ಹೆಚ್ಚಿಸುತ್ತದೆ."

ಆದ್ದರಿಂದ ಬುದ್ಧಿಯನ್ನು ಜನರನ್ನು ಮೋಸಗೊಳಿಸಲೂ ಉಪಯೋಗಿಸಬಹುದು, ಹಿಂಸಿಸಲೂ ಉಪಯೋಗಿಸಬಹುದು ಅಥವಾ ಅವರಿಗೆ ಒಳಿತನ್ನು ಉಂಟುಮಾಡಲು ಮತ್ತು ಸಹಾಯ ಮಾಡಲೂ ಉಪಯೋಗಿಸಬಹುದು. **ಆತ್ಮಬಲ**ದ ಪ್ರಭಾವಕ್ಕೆ ಒಳಪಟ್ಟ **ಬುದ್ಧಿಬಲ** ಮಾತ್ರವೇ ತನಗೂ ಇತರರಿಗೂ ಅನುಗ್ರಹಕಾರಿಯಾಗಿ ಪರಿಣಮಿಸಬಲ್ಲುದು. ಇವೆಲ್ಲವೂ ಅತ್ಯಂತ ಉದಾತ್ತ ಭಾವನೆಗಳು ಮತ್ತು ಆದರ್ಶಗಳು. ಇವುಗಳ ಬಗ್ಗೆ ನೀವು ಚೆನ್ನಾಗಿ ಆಲೋಚಿಸಬೇಕು ಮತ್ತು ನಿಮ್ಮ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು.

**ಸಾರಾಂಶ:** ಸ್ವಾಮಿ ವಿವೇಕಾನಂದ ಸಾಹಿತ್ಯ, ಉಪನಿಷತ್ತುಗಳು ಮತ್ತು ಭಗವದ್ಗೀತೆಯನ್ನು ಅಧ್ಯಯನ ಮಾಡಿದಾಗ ನೀವು ಶಕ್ತಿ ಮತ್ತು ನಿರ್ಭಯತೆ ಅಥವಾ ಅಭಯವನ್ನು ಪಡೆದುಕೊಳ್ಳುತ್ತೀರಿ. ಚೆನ್ನೈನಲ್ಲಿ ಮಾಡಿದ ಒಂದು ಭಾಷಣದಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ: "ಶಕ್ತಿ, ಶಕ್ತಿ – ಇದನ್ನೇ ಪ್ರತಿ ಪುಟದಲ್ಲಿಯೂ ಉಪನಿಷತ್ತುಗಳು ನನಗೆ ಬೋಧಿಸುತ್ತಿರುವುದು." ಇದೇ ರೀತಿ, ಆತ್ಮವಿಶ್ವಾಸ ಅಥವಾ ಆತ್ಮಶ್ರದ್ಧೆಯ ಭಾವನೆಯನ್ನೂ ನೀವು ಈ ಗ್ರಂಥಗಳಲ್ಲಿ ಕಾಣುತ್ತೀರಿ. ಕಠೋಪನಿಷತ್ ಮುಂತಾದ ಎರಡು ಮೂರು ಉಪನಿಷತ್ತುಗಳನ್ನಾದರೂ ನೀವು ಅಧ್ಯಯನ ಮಾಡಲೇಬೇಕು. ನಿಮಗೇ ತಿಳಿದಿರುವಂತೆ, ಸ್ವಾಮೀಜಿಯವರ ಕೆಳಗಿನ ಪ್ರಸಿದ್ಧ ಘೋಷವಾಕ್ಯವು ಕಠೋಪನಿಷತ್ತಿನ ವಾಕ್ಯವೊಂದರ ಭಾವಾನುವಾದವೇ ಆಗಿದೆ: **ಉತ್ತಿಷ್ಠತ, ಜಾಗ್ರತ, ಪ್ರಾಪ್ಯ ವರಾನ್ ನಿಬೋಧತ** –"ಏಳಿ, ಎದ್ದೇಳಿ, ಗುರಿಮುಟ್ಟುವವರೆಗೂ ನಿಲ್ಲದಿರಿ."

ಉಪನಿಷತ್ತುಗಳಿಂದ ನೀವು ಹಲವಾರು ಉನ್ನತ ಭಾವನೆಗಳನ್ನು ಪಡೆದುಕೊಳ್ಳುತ್ತೀರಿ. ಹೀಗಾಗಿ ಚಾರಿತ್ರ್ಯ ನಿರ್ಮಾಣವನ್ನು ಬೋಧಿಸುವ ಪುಸ್ತಕಗಳಿಗೇನೂ ಕೊರತೆಯಿಲ್ಲ. ಅವುಗಳ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಿ. ನೀವು ಪಡೆದು ಕೊಳ್ಳುತ್ತಿರುವ ಶಿಕ್ಷಣವು ನೈಜ ಶಿಕ್ಷಣವಾಗಲಿ, ಬರಿ ಪದವಿಯನ್ನು ದಕ್ಕಿಸಿಕೊಳ್ಳುವ ಪ್ರಕ್ರಿಯೆಯಾಗದಿರಲಿ. ಈ ಬಗೆಯ ಶ್ರೇಷ್ಠ ಶಿಕ್ಷಣವನ್ನು ಪಡೆದುಕೊಂಡು ನೀವು ನಮ್ಮ ದೇಶದ ರಾಜಕಾರಣದಲ್ಲಿಯಾಗಲಿ, ವಿದ್ಯಾಸಂಸ್ಥೆಗಳಲ್ಲಾಗಲಿ, ವೈಜ್ಞಾನಿಕ ಸಂಶೋಧನಾ ಕೇಂದ್ರಗಳಲ್ಲಾಗಲಿ, ವ್ಯಾಪಾರ ಅಥವಾ ಉದ್ಯಮದಲ್ಲಾಗಲಿ, ಕೇಂದ್ರ ಅಥವಾ ರಾಜ್ಯ ಆಡಳಿತ ಸಂಸ್ಥೆಗಳಲ್ಲಾಗಲಿ ಅಧಿಕಾರ ಸ್ಥಾನಗಳನ್ನು ಅಲಂಕರಿಸಬೇಕು; ಆಮೂಲಕ ನಮ್ಮ ಸಮಾಜದ ನೈತಿಕ ಮಟ್ಟ ಮತ್ತು ಮಾನವ ಅಭಿವೃದ್ಧಿಯನ್ನು ಹೆಚ್ಚಿಸಬೇಕು. ಆಗ ಮಾತ್ರ ನೀವೀಗ ಓದುತ್ತಿರುವ ಶೈಕ್ಷಣಿಕ ಸಂಸ್ಥೆಯು ನಿಮ್ಮ ಬಗ್ಗೆ ಹೆಮ್ಮೆ ಪಡುತ್ತದೆ. ನಿಮಗೆಲ್ಲರಿಗೂ ನನ್ನ ಹಾರ್ದಿಕ ಪ್ರೀತಿ ಹಾಗೂ ಶುಭಕಾಮನೆಗಳು. ❋

**ಪೂಜೆ, ಜಪ, ಧ್ಯಾನ ಇವನ್ನೆಲ್ಲ ಮಾಡಬೇಕು. ಹೂವನ್ನು ಅಲುಗಾಡಿಸುತ್ತ ಇದ್ದರೆ ಅದರ ಸುಗಂಧ ಹೇಗೆ ಹೊರಹೊಮ್ಮುವುದೋ, ಶ್ರೀಗಂಧ ತೇಯುತ್ತ ಇದ್ದರೆ ಅದರ ಸುವಾಸನೆ ಹೇಗೆ ಹೊರಗೆ ಬರುವುದೋ ಹಾಗೆ ಭಗವಂತನ ತತ್ತ್ವವನ್ನು ಆಲೋಚನೆ ಮಾಡುತ್ತ ತತ್ತ್ವಜ್ಞಾನದ ಉದಯವಾಗುವುದು. ಮನಸ್ಸಿನ ಆಲೋಚನೆಗಳೆಲ್ಲ ನಾಶವಾದ ಕ್ಷಣವೇ ಸಾಕ್ಷಾತ್ಕಾರ ವುಂಟಾಗುವುದು.**


**–ಶ್ರೀಶಾರದಾ ದೇವಿ**

# ಭಗವಾನ್ ರಮಣ ಮಹರ್ಷಿಗಳೊಂದಿಗೆ

ಸ್ವಾಮಿ ದಾಮೋದರಾನಂದ

ಅನುವಾದ : ಡಾ. ಕೆ.ಎಲ್.ಪ್ರಸನ್ನಾಕ್ಷೀ

ಭಾಗ–೧



ಆಧುನಿಕ ಯುಗದಲ್ಲಿ ಸಾಂಪ್ರದಾಯಿಕ ಜ್ಞಾನಮಾರ್ಗ ಹಾಗೂ ವೇದಾಂತ ಅನುಭವಗಳ ಜೀವಂತ ನಿದರ್ಶನವೆಂಬಂತೆ ಬದುಕಿದ ಸಂತಶ್ರೇಷ್ಠ ಶ್ರೀರಮಣ ಮಹರ್ಷಿಗಳ ನೇರ ಸಂಪರ್ಕ ಹೊಂದಿ, ಅವರ ಪ್ರೇರಣೆಯಿಂದಲೇ ಶ್ರೀರಾಮಕೃಷ್ಣರೆಡೆಗೆ ಬಂದ ಹಿರಿಯ ಸಂನ್ಯಾಸಿಯೋರ್ವರ ವಿಶಿಷ್ಟ ಕಥಾನಕವೊಂದು ಇಲ್ಲಿದೆ. ಸ್ವಾಮಿ ವಿರಜಾನಂದಜಿ ಮಹಾರಾಜ್ ಅವರಿಂದ ಮಂತ್ರದೀಕ್ಷೆ ಪಡೆದ ಲೇಖಕರು ೧೯೫೦ ರಲ್ಲಿ ಅವರಿಂದಲೇ ಸಂನ್ಯಾಸ ಸ್ವೀಕರಿಸಿದರು. ಬಳಿಕ ಅವರು ರಾಮಕೃಷ್ಣ ಮಹಾಸಂಘದ ಬೃಂದಾವನ, ಮೈಸೂರು, ರಂಗೂನ್, ಸಿಂಗಾಪುರ, ಮಲೇಷ್ಯಾ, ಫಿಜಿ, ಆಸ್ಟ್ರೇಲಿಯಾ, ಬೆಂಗಳೂರು (ಹಲಸೂರು) ಮೊದಲಾದ ಶಾಖಾ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿ, ಕಳೆದ ತಿಂಗಳ ೧೩ರಂದು ದೈವಾಧೀನರಾದರು. ಶ್ರೀರಮಣಾಶ್ರಮದ ***Mountain Path*** *( Vol. 46, No.4, Oct-Dec 2009)* ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾದ ಈ ಲೇಖನದ ಅನುವಾದಕರು ಸಂಸ್ಕೃತ ವಿದ್ವಾಂಸರು ಹಾಗೂ ನಿವೃತ್ತ ಕಾಲೇಜು ಪ್ರಾಂಶುಪಾಲರು.

ಕರ್ನಾಟಕದ ಗುರುಪುರ ನನ್ನ ಸ್ವಂತ ಊರು. ನಮ್ಮ ಊರಿಗೆ ಹತ್ತಿರದ ಪಟ್ಟಣ ಮಂಗಳೂರು. ನನ್ನ ಇಪ್ಪತ್ತನೇ ವಯಸ್ಸಿನಲ್ಲಿ, ಅಂದರೆ ೧೯೩೯ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಮನೆಬಿಟ್ಟು ಹೊರಟೆ. ಮಂಗಳೂರಿನಲ್ಲಿ ನಾನು ವಿದ್ಯಾರ್ಥಿನಿಲಯದಲ್ಲಿರುತ್ತಿದ್ದೆ. ಅಲ್ಲಿ ಶ್ರೀರಮಣ ಮಹರ್ಷಿಗಳ ಸಚಿತ್ರ ಜೀವನಚರಿತ್ರೆಯ ಪುಸ್ತಕವನ್ನು ವಿದ್ಯಾರ್ಥಿಗಳು ಸರದಿಯ ಮೇಲೆ ಹಂಚಿಕೊಂಡು ಓದುತ್ತಿದ್ದರು. ನಾನೂ ಆ ಪುಸ್ತಕವನ್ನು ಓದಿದೆ. ಓದುತ್ತಾ ಓದುತ್ತಾ ನಾನು ಆಶ್ಚರ್ಯಚಕಿತನಾದೆ. 'ಅಬ್ಬ! ಇಂತಹ ಮಹರ್ಷಿಗಳು ಈಗಲೂ ಭಾರತದಲ್ಲಿ ಜೀವಂತ ಇರುವರೆ? ಹಾಗಾದರೆ ಅವರ ಬಳಿಗೆ ಹೋಗಿ ನನ್ನನ್ನು ಅವರಿಗೆ ಸಮರ್ಪಿಸಿಕೊಳ್ಳಬೇಕು' – ಎಂಬ ಆಲೋಚನೆ ನನ್ನಲ್ಲಿ ಬಹಳ ತೀವ್ರವಾಗಿ ಉಂಟಾಯಿತು.

ಆಗಿನಿಂದ ನನ್ನ ಮನಸ್ಸು ಚಡಪಡಿಸತೊಡಗಿತು. ಮಂಗಳೂರಿನಿಂದ ತಿರುವಣ್ಣಾಮಲೈಗೆ ಓಡಿಹೋಗುವ ಚಿಂತೆಯೇ ಸದಾ ನನ್ನಲ್ಲಿರುತ್ತಿತ್ತು. ಮಹಾಜ್ಞಾನಿ ಮಹರ್ಷಿಗಳ ಸನ್ನಿಧಿಯಲ್ಲಿರುತ್ತ, ಆಧ್ಯಾತ್ಮಿಕ ಬೆಳಕಿನ ಹಾದಿಯಲ್ಲಿ ನಡೆಯಲು ಅವರಿಂದ ಮಾರ್ಗದರ್ಶನ ಪಡೆಯುವ ಮಹದಾಸೆ ನನ್ನಲ್ಲಿ ಉಂಟಾಗಿತ್ತು. ಈ ಯೋಚನೆ ನನ್ನಲ್ಲಿ ಎಷ್ಟು ಪ್ರಬಲವಾಗಿತ್ತೆಂದರೆ, ನನಗೆ ನನ್ನ ಮುಂದಿನ ವಿದ್ಯಾಭ್ಯಾಸದ ಕುರಿತಾಗಲಿ, ಅದಕ್ಕೆ ನನ್ನ ತಾಯಿ–ತಂದೆಯರ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ ಎಂಬ ಚಿಂತೆಯಾಗಲಿ, ನನ್ನ ಮನಸ್ಸಿನಲ್ಲಿ ಒಂದು ಬಾರಿಯೂ ಬರಲೇ ಇಲ್ಲ. ಆತ್ಮಸಾಕ್ಷಾತ್ಕಾರ ಹೊಂದಿದ ಋಷಿಗಳ ಸನ್ನಿಧಿಯನ್ನು ಪಡೆಯುವ ಅವಕಾಶ ನನಗೆ ದೇವರ ದಯೆಯಿಂದ ದೊರಕಿದೆ – ಎಂದು ನನ್ನ ಅಂತರಂಗ ನುಡಿಯುತ್ತಿತ್ತು. ಹೇಗಾದರಾಗಲಿ, ಏನಾದರಾಗಲಿ ನಾನು ಅವರ ಬಳಿಗೆ ಹೋಗಬೇಕು. ಅವರಿಂದ ಆಧ್ಯಾತ್ಮಿಕ ಮಾರ್ಗದರ್ಶನ ಪಡೆಯಬೇಕು, ಇದೇ ನನ್ನ ಜೀವನದ ಗುರಿಯಾಗಬೇಕು.

ಪ್ರತಿಯೊಂದು ಜೀವಿಯ ಈ ಜನ್ಮದ ನಡೆ, ಆಚಾರ ವಿಚಾರಗಳು ಅದರ ಪೂರ್ವಜನ್ಮದ ಕರ್ಮವನ್ನನುಸರಿಸಿ ಇರುತ್ತವೆ. ಅವು ಆತನ ಪ್ರೌಢಾವಸ್ಥೆಯಲ್ಲಿ ಪುಷ್ಟಿಗೊಳ್ಳುತ್ತವೆ. ನನ್ನ ಹಿಂದಿನ ಜನ್ಮದ ಯಾವುದೋ ಉದಾತ್ತ ಪ್ರವೃತ್ತಿ ನನ್ನ ಜೀವನದಲ್ಲಿ ಈ ಆಕಸ್ಮಿಕ ತಿರುವನ್ನು ತಂದಿರಬೇಕು.

### ದೈವಸಹಾಯ

ವಿದ್ಯಾರ್ಥಿನಿಲಯದ ಆಡಳಿತ ಮಂಡಳಿಯ ನಿರ್ವಾಹಕರಿಗೆ ನಾನು ವಿದ್ಯಾರ್ಥಿನಿಲಯ ಬಿಡುತ್ತಿರುವೆನೆಂದು ಹೇಳಿದೆ. ತಿರುವಣ್ಣಾಮಲೈಗೆ ಒಂದು ಮುಂಗಡ ಟಿಕೆಟ್ ಪಡೆದೆ. ಕೆಲವು ದಿನಗಳ ನಂತರ ನಾನು ಮದ್ರಾಸ್ ಮೇಲ್‌ನ ಒಂದು ಬೋಗಿಯ ಮೂಲೆಯಲ್ಲಿ ಕುಳಿತಿದ್ದೆ. ಅದೇ ಬೋಗಿಯಲ್ಲಿ ಒಬ್ಬ ಸದ್ಗೃಹಸ್ಥನಾದ ಬ್ರಾಹ್ಮಣ ತನ್ನ ಕುಟುಂಬದವರೊಡನೆ ಪ್ರಯಾಣಿಸುತ್ತಿದ್ದರು. ಅವರೆಲ್ಲರೂ ತಮ್ಮ ಆಹಾರವನ್ನು ಹಂಚಿಕೊಂಡರು. ಕುಟುಂಬದ ಯಜಮಾನನ ದೃಷ್ಟಿ ನನ್ನ ಕಡೆಗೆ ಬಿತ್ತು. ಅವರು ನನ್ನನ್ನು ಎಲ್ಲಿಗೆ ಹೋಗುತ್ತಿರುವುದಾಗಿ ಕೇಳಿದರು. ರಮಣಾಶ್ರಮದಲ್ಲಿ ಶ್ರೀರಮಣರನ್ನು ಭೇಟಿಮಾಡಲು ನಾನು ಹೊರಟಿರುವೆನೆಂದು

ಕೇಳಿ ಅವರಿಗೆ ಬಹಳ ಆಶ್ಚರ್ಯವಾಯಿತು. ಹೀಗೆ ಮಾತು ಮುಂದುವರೆಸಿದಾಗ, ನಾನು ಮಧ್ಯರಾತ್ರಿಯಲ್ಲಿ ವಿಲ್ಲುಪುರಂ ಸ್ಟೇಷನ್‌ನಲ್ಲಿ ಇಳಿದು, ಅಲ್ಲಿಂದ ತಿರುವಣ್ಣಾಮಲೈಗೆ ಬೇರೆ ಟ್ರೈನ್ ಹಿಡಿಯಬೇಕೆಂದು ಅವರು ಸಲಹೆ ನೀಡಿದರು. ಪಶ್ಚಿಮ ಕರಾವಳಿಯಿಂದ ಪೂರ್ವ ಕರಾವಳಿಯವರೆಗೆ ಸುತ್ತಿ ಸಾಗುವ ಮದ್ರಾಸ್ ಮೇಲ್‌ನಲ್ಲಿ ತಿರುವಣ್ಣಾಮಲೈಗೆ ಟಿಕೆಟ್ ತೆಗೆದುಕೊಂಡಿದ್ದೆ. ನನ್ನ ತಿರುವಣ್ಣಾಮಲೈ ಸೇರುವ ತೀವ್ರ ಹಂಬಲ, ಮಧ್ಯೆ ಮಧ್ಯೆ ನಾನು ಟ್ರೈನ್ ಬದಲು ಮಾಡಬೇಕಾದೀತೆಂಬ ಅರಿವೂ ಬರದಂತೆ ನನ್ನನ್ನು ಕುರುಡಾಗಿಸಿತ್ತು. ಇದು ದೇವರೇ ಕಳುಹಿಸಿದ ಸಲಹೆ ಎಂದುಕೊಂಡೆ. ನನ್ನ ಅಂತಿಮ ಗುರಿಯಲ್ಲೇ ಮನಸ್ಸನ್ನಿರಿಸಿದ ನಾನು, ಸಂಪರ್ಕ ಟ್ರೈನನ್ನು ತಪ್ಪಿಸಿಕೊಳ್ಳುವ ಎಲ್ಲ ಸಾಧ್ಯತೆಗಳೂ ಈ ದೈವಸಹಾಯದಿಂದ ತಪ್ಪಿತು. ಇದು ದೈವ ಸನ್ನಿಧಾನ ಸೇರಲು ಲಭಿಸಿದ ದೇವರ ಅನುಗ್ರಹವೇ ಎಂದು ನಾನು ಭಾವಿಸಿದೆ.

### ಅರುಣಾಚಲ ಮತ್ತು ಅರುಣಾಚಲೇಶ್ವರ

ನಾನು ಮಧ್ಯರಾತ್ರಿ ವಿಲ್ಲುಪುರಂನಲ್ಲಿ ಟ್ರೈನ್‌ನಿಂದ ಇಳಿದೆ. ತಿರುವಣ್ಣಾಮಲೈಗೆ ಹೋಗುವ ಟ್ರೈನ್ ನಿಂತಿದ್ದ ಪ್ಲಾಟ್‌ಫಾರಂಗೆ ಹೋಗಿ, ನಾನು ಅಲ್ಲಿದ್ದ ಟ್ರೈನನ್ನು ಹತ್ತಿದೆ. ಸ್ವಲ್ಪ ಹೊತ್ತಿನಲ್ಲೇ ಟ್ರೈನ್ ಚಲಿಸತೊಡಗಿತು. ಬೆಳಕು ಮೂಡುವ ಹೊತ್ತಿಗೆ ಬಹಳ ದೂರದಲ್ಲಿ ಎತ್ತರದ ಅರುಣಾಚಲೇಶ್ವರ ದೇವಾಲಯದ ಗೋಡೆಗಳಿಗೆ ಸೇರಿದ ಗೋಪುರವನ್ನು ಕಂಡೆ. ಅದು ನಾಲ್ಕೂ ದಿಕ್ಕುಗಳಿಗೆ ಹರಡಿ ನಿಂತಿತ್ತು. ಶಿವ ತಾನೇ ಲಿಂಗರೂಪದಿಂದ ಪ್ರಕಟವಾದ ಪವಿತ್ರ ಜಾಗದಲ್ಲಿ ಆ ದೇವಾಲಯವಿದ್ದಿತು. ಅರುಣಾಚಲ ಪರ್ವತದ ಬುಡದಲ್ಲಿ ಪಾರ್ವತೀದೇವಿಯೂ ನೆಲೆಸಿರುವಳು.

ಹಿಂದೂ ದೇವಾಲಯಗಳಲ್ಲಿ ಪರತತ್ತ್ವವಾದ ಸಚ್ಚಿದಾನಂದರೂಪೀ ಪರಮಾತ್ಮನು ತನ್ನಿಂದ ಅಭಿನ್ನವಾದ ಪರಾಶಕ್ತಿಯೊಡಗೂಡಿಯೇ ಇರುವನು. ಇವರಿಬ್ಬರ ಸಂಗ ಶಾಶ್ವತವಾದದ್ದು. ಇದಕ್ಕೆ ಆದಿ-ಅಂತ್ಯಗಳಿಲ್ಲ. ಇವರಿಬ್ಬರೂ ನಿರಂತರ ಸೃಷ್ಟಿ, ಲಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು ಎಂಬ ತತ್ತ್ವವನ್ನು ಇದು ಸಾರುತ್ತದೆ. ಬೇರೆ ದೇವಾಲಯಗಳಲ್ಲೂ ಇದೇ ಸತ್ಯವನ್ನು ಪುಂದೇವತೆ ಸ್ತ್ರೀದೇವತೆಗಳು ಪ್ರತಿನಿಧಿಸುತ್ತವೆ. ಮಹಾಕಾಳಿಯು ಮಹಾಕಾಲನ ಮೇಲೆ ನರ್ತನ ಮಾಡುತ್ತಿರುವುದನ್ನು, ಶಿವನು ಅದಾವುದರಿಂದಲೂ ಪ್ರಭಾವಿತನಾಗದೆ ತನ್ನ ನಿತ್ಯ ನಿರಂತರ ಸಮಾಧಿಯಲ್ಲೇ ಲೀನನಾಗಿರುವುದನ್ನು ನಾವು ಕೆಲವು ದೇವಾಲಯಗಳಲ್ಲಿ ನೋಡುತ್ತೇವೆ.

ಭಾರತೀಯ ದೇವಾಲಯ ಸಂಸ್ಕೃತಿಯಲ್ಲೇ ಈ ಶಾಶ್ವತ ಆಧ್ಯಾತ್ಮಿಕ ಸತ್ಯ ಅಡಗಿದೆ. ಪಾರಂಪರಿಕ ಸಂಪ್ರದಾಯಗಳ ತುಕ್ಕಿನಡಿಯಲ್ಲಿ ಈ ಶಾಶ್ವತ ಸತ್ಯಗಳು ನೆಲಸಮವಾಗಿ ಹೋಗಿರುವುದು ಅತ್ಯಂತ ದುರದೃಷ್ಟಕರ. ಆಧ್ಯಾತ್ಮಿಕ ಪಿಪಾಸುಗಳ ಅಧ್ಯಾತ್ಮ ತೃಷೆಯನ್ನು ಹೋಗಲಾಡಿಸಲು ಅಲ್ಲೊಮ್ಮೆ ಇಲ್ಲೊಮ್ಮೆ ಭಕ್ತೆ ಮೀರಾ, ತುಲಸೀದಾಸ, ಶ್ರೀರಾಮಕೃಷ್ಣರಂತಹ ಮಹಾನ್ ಆಚಾರ್ಯರು ಆಧ್ಯಾತ್ಮಿಕ ಜೀವನದ ಮಹಾ ಆದರ್ಶಗಳಾಗಿ ಸಮಾಜದಲ್ಲಿ ಅರಳಿರುವುದೂ ಕಂಡುಬರುತ್ತದೆ. ಸ್ವಾಮಿ ವಿವೇಕಾನಂದರು ಇಂತಹ ಮಹನೀಯರ ಆವಿರ್ಭಾವವನ್ನು **ನಿರ್ಗಚ್ಛತಿ ಜಗಜ್ಜಾಲಾತ್ ಪಿಂಜರಾದಿವ ಕೇಸರೀ** – 'ಪ್ರಾಪಂಚಿಕ ಮಾಯಾಬಂಧವೆಂಬ ಬಲೆಯನ್ನು ಕತ್ತರಿಸಿ ಪಂಜರದಿಂದ ಹೊರಬಂದ ಸಿಂಹದಂತೆ' ಅವರು ಪ್ರಕಟಗೊಳ್ಳುವರೆಂದು ವಿವರಿಸಿದ್ದಾರೆ. ಶ್ರೀರಮಣರೂ ಅಂತಹ ಒಂದು ಆಧ್ಯಾತ್ಮಿಕ ಪ್ರಬಲ ಶಕ್ತಿ.

### ದರ್ಶನ ಮತ್ತು ದಯಾಪ್ರಕಾಶ

ರಾತ್ರಿಯೆಲ್ಲ ಪ್ರಯಾಣಮಾಡಿ ಬೆಳಗಿನಿಂದ ಏನೂ ಆಹಾರವಿಲ್ಲದೆ ತಿರುವಣ್ಣಾಮಲೈ ಸ್ಟೇಷನ್‌ಗೆ ಮಧ್ಯಾಹ್ನದ ವೇಳೆಗೆ ತಲುಪಿದೆ. ಸ್ಟೇಶನ್ನಿನ ಹೊರಗೆ ಬಂದು ಒಂದು ಕುದುರೆಗಾಡಿಯಲ್ಲಿ ಕುಳಿತು ಶ್ರೀರಮಣರ ಆಶ್ರಮವನ್ನು ಎರಡು ಘಂಟೆಯ ವೇಳೆಗೆ ತಲುಪಿದೆ. ಆಶ್ರಮದ ಒಳಗೆ ಪ್ರವೇಶಿಸುವ ಮುನ್ನ ನನ್ನ ಹೆಚ್ಚಿನ ಬಟ್ಟೆಗಳನ್ನು, ಉಳಿದಿದ್ದ ಹೆಚ್ಚಿನ ಹಣವನ್ನು ಕುದುರೆಗಾಡಿಯವನಿಗೇ ಕೊಟ್ಟು ಬಿಟ್ಟೆ. ಅವನು ನನಗೆ ಅಲ್ಲಿದ್ದ ಎಲ್ಲಾ ಕಟ್ಟಡಗಳನ್ನೂ, ಶ್ರೀರಮಣ ಮಹರ್ಷಿಗಳು ಇರುವ ಸಭಾಂಗಣವನ್ನೂ ತೋರಿಸಿದ. ದೇವೀಮಂದಿರದ ಕೊಳದಲ್ಲಿ ಸ್ನಾನಮಾಡಿದ ನಾನು ಮಹರ್ಷಿಗಳು ಕುಳಿತಿದ್ದ ಸಭಾಂಗಣಕ್ಕೆ ನೇರವಾಗಿ ಹೋದೆ.

ಪೂಜ್ಯರಿಗೆ ಭಕ್ತಿಯಿಂದ ನಮಸ್ಕರಿಸಿ, ಗೋಡೆಗೆ ಒರಗಿ ಕುಳಿತೆ. ಬೆಳಗಿನಿಂದ ಆಹಾರ ಇಲ್ಲದ್ದರಿಂದಲೂ, ಬಹಳ ಕಾಲದ ಪ್ರಯಾಣದಿಂದಲೂ ನಾನು ಬಹಳ ದಣಿದಿದ್ದೆ. ಹೀಗೆ ನಾನು ಅವರ ಬಳಿ ಕುಳಿತುಕೊಳ್ಳುತ್ತಿದ್ದಂತೆ ಮಹರ್ಷಿಗಳು ನನ್ನನ್ನೇ ರೆಪ್ಪೆ ಮಿಟುಕಿಸದೆ ದೃಷ್ಟಿಸಿ ನೋಡಿದರು. ನಾನೂ ಪೂರ್ಣ ದೈನ್ಯ ಮತ್ತು ಆಶ್ಚರ್ಯಗಳಿಂದ ಅವರನ್ನೇ ಎವೆಯಿಕ್ಕದೆ ನೋಡಿದೆ. ಸ್ವಲ್ಪಕಾಲದವರೆಗೆ, ಒಬ್ಬರ ಕಣ್ಣೊಳಗೆ ಒಬ್ಬರ ಕಣ್ಣು ನೆಟ್ಟು, ನಾವಿಬ್ಬರೂ ಪರಸ್ಪರ ನೋಡುತ್ತಲೇ ಇದ್ದೆವು. ಶ್ರೀಭಗವಾನರು ನನ್ನ ಮೇಲೆ ಕೃಪಾವರ್ಷ ಸುರಿಸುತ್ತಿರುವಂತೆ ನನಗೆ ಭಾಸವಾಗುತ್ತಿತ್ತು. ಆಧ್ಯಾತ್ಮಿಕ ಜೀವನದ ಎಲ್ಲ ಕಷ್ಟನಷ್ಟಗಳನ್ನೂ ಎದುರಿಸಿ, ಆಧ್ಯಾತ್ಮಿಕ ಜೀವನದಲ್ಲೇ ನೆಲೆಗೊಳ್ಳುವಂತೆ ಮಹರ್ಷಿಗಳು ಕೇವಲ ಈ ದೃಷ್ಟಿಯಿಂದಲೇ ಮಾಡುತ್ತಿದ್ದಾರೆ ಎಂದು ಅನುಭವವಾಗತೊಡಗಿತು. ಬಹುಶಃ ಅವರು ತಮ್ಮ ಒಳಗಣ್ಣಿನಿಂದಲೇ ನನ್ನ ಆಧ್ಯಾತ್ಮಿಕ ಗುರಿಯನ್ನು ಅರಿತಿರಬೇಕು. ಕೆಲವು ನಿಮಿಷಗಳ ನಂತರ ಅವರ ಕಣ್ಣುಗಳು ಅರ್ಧ ಮುಚ್ಚಿಕೊಂಡವು. ಅವರು ಸಮಾಧಿಸ್ಥಿತಿಗೇರಿದರು. ಆ ನಂತರ ನನಗೆ ತಿಳಿಯಿತು–ಮಹರ್ಷಿಗಳಿಗೆ ಈ ರೀತಿಯ ಸ್ಥಿತಿ ಬಹಳ ಸಹಜವಾದುದು, ಮತ್ತು ಹಗಲುರಾತ್ರಿ ಅವರು ದೇವರೊಂದಿಗೆ ಒಂದಾಗಿ ಇರುತ್ತಿದ್ದರು ಎಂದು.

ಪರದೇವತೆಯೊಡನೆ ಸಹಸ್ಪಂದನವನ್ನು ಹೊಂದಿ ಶಾಂತಿ ಆನಂದಗಳಲ್ಲಿ ಒಂದಾದಾಗ ಅದನ್ನು 'ಸಹಜಸಮಾಧಿ' ಎನ್ನುವರು. **"ವಟವೃಕ್ಷದ ಕೆಳಗೆ ಕುಳಿತಿರುವ ಎಲ್ಲ ಶಿಷ್ಯರೂ ವಯಸ್ಸಾದವರೇ, ಆದರೆ ಗುರು ಯುವಕ. ಅವನು ಮೌನ ದಿಂದಲೇ ಶಿಷ್ಯರಿಗೆ ಉಪದೇಶಿಸುತ್ತಿದ್ದಾನೆ, ಶಿಷ್ಯರ ಎಲ್ಲ ಸಂಶಯಗಳನ್ನೂ ದೂರ ಮಾಡುತ್ತಿದ್ದಾನೆ. ಎಂಥ ಆಶ್ಚರ್ಯ!"** *(ಶ್ರೀಶಂಕರಾಚಾರ್ಯ, ದಕ್ಷಿಣಾಮೂರ್ತಿ ಸ್ತೋತ್ರ, ಶ್ಲೋಕ ೧೨)*

### ಆಶ್ರಮವಾಸ

ಸ್ವಲ್ಪ ಸಮಯದ ನಂತರ ಆಶ್ರಮದವರು ಸಭಾಂಗಣದಲ್ಲಿ ಕುಳಿತಿದ್ದ ಭಕ್ತರಿಗೆ ದೊನ್ನೆಗಳಲ್ಲಿ ಹಣ್ಣಿನ ರಸಾಯನವನ್ನು ಪ್ರಸಾದವಾಗಿ ಹಂಚತೊಡಗಿದರು. ನನ್ನ ಪಾಲಿನ ಪ್ರಸಾದ ವನ್ನು ಸ್ವೀಕರಿಸಿ ಶ್ರೀರಮಣರಿಂದ ಬೀಳ್ಕೊಂಡೆ. ಸಭಾಂಗಣ ಮತ್ತು ಅಡುಗೆಮನೆಯ ನಡುವೆ ಇದ್ದ ಓಣಿಯನ್ನು ಪ್ರವೇಶಿಸಿದೆ. ಅಡುಗೆಮನೆಯ ಹತ್ತಿರ ಅಡುಗೆಗೆ ಸಹಾಯ ಮಾಡುತ್ತಿದ್ದ ಕೆಲವು ತಾಯಂದಿರ ಜೊತೆ, ಈ ಆಶ್ರಮದ ಸರ್ವಾಧಿಕಾರಿ (ಮ್ಯಾನೇಜರ್) ಆಗಿದ್ದ ಶ್ರೀರಮಣರ ಸಹೋದರ ಸ್ವಾಮಿ ನಿರಂಜನಾನಂದರು ನಿಂತಿದ್ದರು. ಆಶ್ರಮದಲ್ಲೇ ಇದ್ದು ಆಧ್ಯಾತ್ಮಿಕ ಜೀವನ ನಡೆಸಬೇಕೆಂಬ ನನ್ನ ಅಭಿಲಾಷೆಯನ್ನು ಅವರಿಗೆ ತಿಳಿಸಿದೆ. ಕೆಲವು ಪ್ರಶ್ನೋತ್ತರಗಳ ನಂತರ ಅವರು ನನಗೆ ಅಲ್ಲಿರಲು ಅನುಮತಿ ನೀಡಿದರು.

ಸ್ವಲ್ಪವೇ ಆಧ್ಯಾತ್ಮಿಕ ಒಲವಿದ್ದ ನನ್ನಂತಹ ಒಬ್ಬ ಯುವಕ ಹಿಂದೆ ಅಲ್ಲಿದ್ದ. ಸ್ವಲ್ಪಕಾಲ ಅಲ್ಲಿ ನೆಲೆಸಿದ ನಂತರ ಅವನ ಮನಸ್ಸಿನಲ್ಲಿ ತಾನು ಆಶ್ರಮದಲ್ಲಿರಬೇಕಾದ ಅಗತ್ಯವಿದೆಯೇ ಎಂಬ ಸಂದೇಹ ಬಂದಿತು. ಅದಕ್ಕಾಗಿ ಆತ ಶ್ರೀರಮಣರ ಬಳಿ ಹೋಗಿ, 'ನಾನು ಇಲ್ಲಿರುವುದು ಒಳ್ಳೆಯದೇ, ಅಥವಾ ಮನೆಗೆ ಹೊಗಿ ನನ್ನ ತಾಯಿ ತಂದೆಯರ ಸೇವೆ ಮಾಡುವುದು ಒಳ್ಳೆಯದೆ?' ಎಂದು ಕೇಳಿದ. 'ಆಶ್ರಮದಲ್ಲಿದ್ದು ಆಧ್ಯಾತ್ಮಿಕ ಆದರ್ಶಗಳನ್ನು ಅನುಸರಿಸುವುದು ಒಳ್ಳೆಯದು ಎಂದು ನಿನಗನ್ನಿಸಿದರೆ ನೀನು ಹಾಗೆ ಮಾಡಬಹುದು. ಇಲ್ಲ, ಮನೆಗೆ ಹೋಗಿ ತಂದೆ ತಾಯಿಗಳ ಸೇವೆ ಮಾಡುವುದೇ ಒಳ್ಳೆಯದು ಎಂದೆನ್ನಿಸಿದರೆ ನೀನು ಆ ಮಾರ್ಗವನ್ನೇ ಹಿಡಿಯಬಹುದು' ಎಂದು ಉತ್ತರಿಸಿ ಶ್ರೀರಮಣರು ಅವನ ಪೂರ್ವಕರ್ಮದ ಅಥವಾ ಹಿಂದಿನ ಜನ್ಮಗಳ ಸಂಸ್ಕಾರಗಳಿಗನುಗುಣವಾಗಿ ಆ ಯುವಕ ತನ್ನ ಇಚ್ಛೆಯನ್ನೇ ಅನುಸರಿಸಲು ಅವಕಾಶ ಕೊಟ್ಟರು. ಕೌಟುಂಬಿಕ ಜೀವನದ ಆಕರ್ಷಣೆಯೇ ಹೆಚ್ಚು ಬಲಿಷ್ಠವಾಗಿ ಆತನನ್ನು ಸೆಳೆದುದರಿಂದ ಆ ಯುವಕ ಮನೆಗೇ ಹಿಂತಿರುಗಿದ.

ಅತಿಯಾದ ಸೆಖೆ ಇದ್ದುದರಿಂದ ಆ ರಾತ್ರಿ ನಾನು ಪಡಸಾಲೆಯಲ್ಲೇ ಮಲಗಿಕೊಂಡೆ. ಆಶ್ರಮದ ಇತರರೂ ಬೇರೆ ಬೇರೆ ಜಾಗಗಳಲ್ಲಿ ಹಾಸಿ ಮಲಗಿದರು.

### ಶ್ರೀಭಗವಾನರ ಮುಗುಳ್ನಗೆಯ ನೋಟ

ಅಡುಗೆ ಮನೆಯಲ್ಲಿ ಸಹಾಯ ಮಾಡುವ ಕೆಲಸವನ್ನು ನನಗೆ ವಹಿಸಿದರು. ಅಡುಗೆಮನೆಗೆ ಅಂಗಡಿಯಿಂದ ಕಟ್ಟಿಗೆ ತರುವುದು, ಗೋಶಾಲೆಯಿಂದ ಬಂದ ಹಾಲನ್ನು ಕಾಯಿಸುವುದು, ಕೆಲಸದವರು ತೊಳೆದಿಟ್ಟಿದ್ದ ಅಡುಗೆಮನೆಯ ದೊಡ್ಡ ದೊಡ್ಡ ಪಾತ್ರೆಗಳನ್ನು ಗಲಬರಿಸಿಕೊಂಡು ಬರುವುದು, ಇವೇ ಮೊದಲಾದ ಕೆಲಸಗಳು ನನ್ನ ಪಾಲಿಗೆ ಬಂದಿದ್ದವು. ಆಶ್ರಮಕ್ಕೆ ಬರುತ್ತಿದ್ದ ಕೊಡುಗೆಗಳಿಗೆ ಅನುಗುಣವಾಗಿ ಆಶ್ರಮದ ಕಟ್ಟಡ ನಿರ್ಮಾಣ ನಿಧಾನವಾಗಿ ಸಾಗುತ್ತಿತ್ತು. ಅಡುಗೆಮನೆಯ ಗೋಡೆಗಳು ಮಣ್ಣಿನಾದಾಗಿದ್ದವು. ಅವಕ್ಕೆ ದೊಡ್ಡ ದೊಡ್ಡ ಗವಾಕ್ಷಿಗಳಿದ್ದವು. ಕೋತಿಗಳು ಆಗಾಗ ಆ ಗವಾಕ್ಷಿಯಲ್ಲಿ ಇಣುಕುತ್ತಿದ್ದವು. ಅವಕಾಶವೇನಾದರೂ ದೊರಕಿದರೆ ಅವು ಆ ಗವಾಕ್ಷಿಯ ಮೂಲಕ ಅಡುಗೆಮನೆಯ ಒಳಕ್ಕೆ ಬಂದು ಸಿಕ್ಕಿದ ಆಹಾರವನ್ನು ತಿನ್ನುತ್ತಿದ್ದವು. ಆದುದ ರಿಂದ ಮಧ್ಯಾಹ್ನದ ಊಟದ ನಂತರ ಅಡುಗೆ ಮಾಡುವ ಮಹಿಳೆಯರು ವಿಶ್ರಾಂತಿಗೆ ಹೋದಾಗ ಕೋತಿಗಳು ಅಡುಗೆ ಮನೆ ಪ್ರವೇಶಿಸದಂತೆ ಒಂದು ಕೋಲನ್ನು ಇಟ್ಟುಕೊಂಡು ಕಾಯುವುದೂ ನನ್ನ ಕೆಲಸವಾಗಿತ್ತು.

ಭಗವಾನ್ ರಮಣರು ಬಹಿರ್ದೆಶೆಗೆ ಹೋಗಬೇಕಾದ ಸಂದರ್ಭಗಳನ್ನು ಬಿಟ್ಟು ಉಳಿದ ಎಲ್ಲಾ ಸಮಯದಲ್ಲೂ ಆ ದೊಡ್ಡ ಸಭಾಂಗಣದ ಸೋಫಾದಲ್ಲಿ ಒರಗಿರುತ್ತಿದ್ದರು ಅಥವಾ ಕುಳಿತಿರುತ್ತಿದ್ದರು. ನಾನು ಮಾಡುತ್ತಿದ್ದ ಮುಕ್ಕಾಲು ಭಾಗ ಎಲ್ಲ ಕೆಲಸಗಳೂ ಬಾವಿಯ ಹತ್ತಿರದ ಓಣಿಯಲ್ಲೇ ಆಗಿರುತ್ತಿತ್ತು. ಆ ಓಣಿಯ ಮೂಲಕವೇ ಭಗವಾನರು ಬಚ್ಚಲ ಮನೆಗೆ ಹೊಗುತ್ತಿದ್ದರು. ಒಂದು ದಿನ ನನಗೆ ಅಭ್ಯಾಸವಿಲ್ಲದೆ ದೊಡ್ಡ ದೊಡ್ಡ ಪಾತ್ರೆಗಳನ್ನು ತೊಳೆಯುತ್ತಾ ಇದ್ದೆ. ಭಗವಾನರು ಎಂದಿನಂತೆ ಸೊಂಟಕ್ಕೆ ಸುತ್ತಿದ್ದ ತುಂಡುವಸ್ತ್ರದೊಡನೆ ಸ್ವಲ್ಪ ದೂರದಲ್ಲಿ ನಿಂತಿದ್ದರು. ಅವರ ತೋಳಡಿಯಲ್ಲಿ ಒಂದು ಟವಲ್ಲಿತ್ತು. ಒಂದು ಕೈಯಲ್ಲಿ ನೀರಿನ ತಂಬಿಗೆ, ಮತ್ತೊಂದು ಕೈಯಲ್ಲಿ ನಡಿಗೆಯ ಕೋಲು ಹಿಡಿದಿದ್ದರು. ನಾನು ತಕ್ಷಣ ನೋಡಿದೆ, ಅವರ ಮುಗುಳ್ನಗೆಯ ದರ್ಶನ ಪಡೆದೆ. ಪಕ್ಕಕ್ಕೆ ಸರಿದು ಅವರು ಹೋಗಲು ದಾರಿಮಾಡಿ ನಿಂತೆ. ಆದರೂ ನನ್ನೆಡೆಗೆ ಕೃಪಾದೃಷ್ಟಿ ಹರಿಸುತ್ತಾ ಅವರು, 'ಅದೇನೂ ಅಗತ್ಯವಿಲ್ಲ, ನಿನ್ನ ಕೆಲಸ ನೀನು ಮುಂದುವರಿಸು' ಎಂದು ಹೇಳಿದರು. ನಾನು ಬೇಗನೆ ಪಾತ್ರೆಗಳನೆಲ್ಲಾ ಪಕ್ಕಕ್ಕೆ ಸರಿಸಿ, ಅವರು ಆ ಹಾದಿಯಲ್ಲೇ ಹೋಗುವಂತೆ ಪ್ರಾರ್ಥಿಸಿಕೊಂಡೆ. ಆಗ ಅವರು ಒಂದೆರಡು ಹೆಜ್ಜೆ ಹತ್ತಿರ ಬಂದು, ಮೆಲ್ಲನೆ ತಮ್ಮ ಪಾಡಿಗೆ ತಾವು ಹೊರಟುಹೋದರು. ಆಗ ನನಗೆ, 'ಎಂತಹ ವಿನಯವಂತಿಕೆ! ಅಹಂಕಾರದ ಸೋಂಕೂ ಇಲ್ಲ. ತನ್ನತನವೇ ಇಲ್ಲದ ಎಂಥ ಮಹಾಯೋಗಿ ಈತ!' ಎನ್ನಿಸಿತು.